

ಜಾಗತಿಕ ಕ್ರಿಕೆಟ್ ಕುಂಭಮೇಳಕ್ಕೆ ಕ್ಷಣಗಣನೆ ಆರಂಭವಾಗಿದೆ. ಅಕ್ಟೋಬರ್ 5ರಿಂದ ನವೆಂಬರ್ 19ರ ತನಕ 13ನೇ 'ಐಸಿಸಿ' ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸಂಭ್ರಮ. ಈ ಪಂದ್ಯಾವಳಿ ಹಲವು ಕಾರಣಗಳಿಂದಾಗಿ ಮಹತ್ವದ್ದೆನ್ನಿಸಿದೆ. ರೋಹಿತ್ ಶರ್ಮಾ ಮುಂದಾಳತ್ವದಲ್ಲಿ ಭಾರತ ತಂಡಕ್ಕೆ ಮೊದಲ ಏಕದಿನ ವಿಶ್ವಕಪ್ ಇದಾಗಿದ್ದು, ತಂಡದೊಂದಿಗೆ ಅವರ ನಾಯಕತ್ವಕ್ಕೂ ಇದು ಪರೀಕ್ಷೆಯ ಕಾಲ. ಇತ್ತೀಚೆಗೆ ನಡೆದ ಏಷ್ಯಾ ಕಪ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಗಳಿಸಿದ್ದು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ. ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ ಅನುಭವ, ವೇಗದ ಬೌಲರ್‌ಗಳ ಪಾರಮ್ಯ, ಶುಭಮನ್ ಗಿಲ್ ಅವರಂಥ ಹೊಸ ಚಿಗುರಿನ ಭರವಸೆ ಭಾರತ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡ ಎನ್ನುವ ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ವೆಸ್ಟ್ ಇಂಡೀಸ್ ತಂಡವಿಲ್ಲದ ಮೊದಲ ವಿಶ್ವಕಪ್ ಇದು. 48 ವರ್ಷಗಳ ಟೂರ್ನಿಯ ಇತಿಹಾಸದಲ್ಲಿ ಭಾರತ ಮೊದಲ ಬಾರಿಗೆ ಸ್ವತಂತ್ರವಾಗಿ ಟೂರ್ನಿಯ ಆತಿಥ್ಯ ವಹಿಸಿಕೊಂಡಿದೆ. ಮುಂದುವರಿದ ಕ್ರೀಡಾ ರಾಷ್ಟ್ರಗಳಿಗೆ ಭಾರತ ತನ್ನ ಕ್ರೀಡಾ ಸಂಘಟನಾ ಶಕ್ತಿಯನ್ನು ತೋರಿಸಲು ಇದು ಅವಕಾಶವೂ ಹೌದು. ಈ ದೀರ್ಘ ವಿಶ್ಲೇಷಣೆ, ಕ್ರಿಕೆಟ್ ಹಬ್ಬಕ್ಕೆ 'ಸುಧಾ' ರೂಪಿಸಿರುವ ಮುನ್ನುಡಿ.